# ಉಪ ತಹಶೀಲ್ದಾರರು, ನಾಡ ಕಾರ್ಯಲಯ, ಇಟ್ಟಿಗಿ ರವರ ನ್ಯಾಯಾಲಯ

| ಅರ್ಜಿದಾರರು | ತಕರಾರುದಾರರು |
|---|---|
| 1.ಮಣೆಗಾರ ಸತ್ಯವತಿ ತಂದೆ ಲೇಟ್ ಮಣೆಗಾರ ಶೇಖರಪ್ಪ,<br>2.ಮಣೆಗಾರ ಶಿವರಂಜನಿ ತಂದೆ ಮಣೆಗಾರ ಶೇಖರಪ್ಪ,<br>3.ಮಣೆಗಾರ ಗೌರಮ್ಮ ಗಂಡ ಲೇಟ್ ಮಣೆಗಾರ ಶೇಖರಪ್ಪ,<br>ನಾಗತಿಬಸಾಪುರ ಗ್ರಾಮ, ಹಡಗಲಿ ತಾ.<br>{ಶ್ರೀ ಸುರೇಶ್ ಸೊಪ್ಪಿನ, ವಕೀಲರು, ಹಡಗಲಿ} | ಎಂ. ಹನುಮವ್ವ ಗಂಡ ಲೇಟ್ ಶಿವಕುಮಾರ,<br>ಹುಗಲೂರು ಗ್ರಾಮ, ಹಡಗಲಿ ತಾ. |

**ವಿವಾದಿತ ಜಮೀನಿನ ವಿವರ:**

| ಕ್ರ..ಸಂ. | ಗ್ರಾಮದ ಹೆಸರು | ಸರ್ವೆ ನಂಬರ್ | ವಿಸ್ತೀರ್ಣ | ತರಹ |
|---|---|---|---|---|
| 1. | ಹುಗಲೂರು | 328/ಎ | 7–85 | ಖುಷ್ಕಿ |

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹಡಗಲಿ ತಾಲೂಕಿನ ಹುಗಲೂರು ಗ್ರಾಮದ ಸ.ನಂ.328/ಎ ವಿ:7–85 ಎಕರೆ ಜಮೀನಿಗೆ ಸಂಬಂಧಿಸಿದಂತೆ, ನಾಗತಿಬಸಾಪುರ ಗ್ರಾಮದ ನಿವಾಸಿಯಾದ 1.ಮಣೆಗಾರ ಸತ್ಯವತಿ ತಂದೆ ಲೇಟ್ ಮಣೆಗಾರ ಶೇಖರಪ್ಪ, 2.ಮಣೆಗಾರ ಶಿವರಂಜನಿ ತಂದೆ ಮಣೆಗಾರ ಶೇಖರಪ್ಪ, 3.ಮಣೆಗಾರ ಗೌರಮ್ಮ ಗಂಡ ಲೇಟ್ ಮಣೆಗಾರ ಶೇಖರಪ್ಪ ಇವರು ದಿ:24–02–2015 ರಂದು ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ 21ರ ನೋಟಿಸನ್ನು ದಿ:28–02–2015 ಜಾರಿ ಮಾಡಲಾಗಿ ನಿಗದಿತ ಅವಧಿಯೊಳಗೆ ಅಂದರೆ ದಿ:12–03–2015 ರಂದು ಹುಗಲೂರು ಗ್ರಾಮದ ಎಂ. ಹನುಮವ್ವ ಗಂಡ ಲೇಟ್ ಶಿವಕುಮಾರ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು, ಇಟ್ಟಿಗಿ ರವರು **M.NO.41/2014-15** ರ ಕಡತವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ವಿಚಾರಣೆ ದಿನಾಂಕ 23–07–2014 ರಂದು ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರ ಪರ ವಕೀಲರು ಮತ್ತು ತಕರಾರುದಾರು ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ಅರ್ಜಿದಾರರ ಪರ ವಕೀಲರು ಹಾಜರಾಗಿ ಕಂಪ್ಯೂಟರ್ ಪಹಣಿ, ವಂಶವೃಕ್ಷ ಪ್ರತಿ ಹಾಗೂ ಲಿಖಿತ ವಾದಪತ್ರವನ್ನು ಸಲ್ಲಿಸುತ್ತಾ ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿದರು. ತಕರಾರುದಾರರು ಹಾಜರಾಗಿ ತಾವು ಈಗಾಗಲೇ ತಕರಾರು ಅರ್ಜಿಯೊಂದಿಗೆ ದಾಖಲೆಗಳನ್ನು ಸಲ್ಲಿಸಿರುವುದಾಗಿ ತಿಳಿಸಿದರು.

ಅರ್ಜಿದಾರರು ಮತ್ತು ತಕರಾರುದಾರರು ಸಲ್ಲಿಸಿದ ದಾಖಲೆಗಳು ಮತ್ತು ಹೇಳಿಕೆಗಳನ್ನು ಪರಿಶೀಲಿಸಲಾಯಿತು. ತಕರಾರುದಾರರು ಸಲ್ಲಿಸಿದ ತಕರಾರು ಅರ್ಜಿಯಲ್ಲಿ ತಕರಾರುದಾರರು ತಾನು ನಾಗತಿಬಸಾಪುರ ಗ್ರಾಮದ ನಿವಾಸಿಯಿದು, ನನ್ನ ಮಾವನವರಾದ ಶೇಖರಪ್ಪ ಮಣೆಗಾರರವರ ಸ.ನಂ.328/ಎ ವಿ:7–85 ರ ಪೈಕಿ 5–20 ಎಕರೆ ಜಮೀನನ್ನು ಖರೀದಿಸಿದ್ದು, ಅದರ ಖಾತೆ ಬದಲಾವಣೆ ಆಗಬೇಕಿದೆ. ಆದರೆ ಇವರ 2ನೇ ಹೆಂಡತಿ ಮತ್ತು ಮೊದಲನೆ ಹೆಂಡತಿ ಮಕ್ಕಳು ನಮಗೆ ತಿಳಿಯದ ಹಾಗೆ ಖಾತೆ ಮಾಡಿಕೊಳ್ಳುತ್ತಿರುವ ಬಗ್ಗೆ ಗುಮಾನಿ ಬಂದಿದೆ. ಇದರಲ್ಲಿ 7–85 ರ ಪೈಕಿ 2–60 ಪಾಲುಪಟ್ಟಿಯಾಗಿದೆ. ಹಾಗಾಗಿ ಸಮಸದ್ಯೆ ಇರುವ ಪ್ರಯುಕ್ತ ಖಾತೆ ಬದಲಾವಣೆ ಅರ್ಜಿ ತಡೆ ಹಿಡಿಯಬೇಕೆಂದು ವಿನಂತಿಸಿರುತ್ತಾರೆ. ತಕರಾರುದಾರರು ಸಲ್ಲಿಸಿದ ದಾಖಲೆಯಲ್ಲಿ ದಿ:4–12–2006 ರಂದು ಮಾಡಿಕೊಂಡ ಜಮೀನು ಖರೀದಿ ಕ್ರಯ ಕರಾರು ಪತ್ರ ಸಲ್ಲಿಸಿದ್ದು, ಸದರಿ ಪತ್ರವು ನೋಂದಾಯಿತವಾಗಿರುವುದಿಲ್ಲ. ತದನಂತರ ಖರೀದಿದಾರರ ಹೆಸರಿಗೆ ಹಕ್ಕು ಬದಲಾವಣೆ ಆಗಿರುವುದಿಲ್ಲ. ಕಂಪ್ಯೂಟರ್ ಪಹಣಿ ಪತ್ರಿಕೆ ಪ್ರತಿ, ಹಳೆಯ ಕೈ ಬರಹ ಪಹಣಿ ಪ್ರತಿಗಳನ್ನು ಸಲ್ಲಿಸಿದ್ದು, 1981–82 ರಿಂದ 1998–99 ರ ವರೆಗಿನ ಕೈ ಬರಹ ಪಹಣಿಯಲ್ಲಿ ಮಣೆಗಾರ ಭರ್ಮವ್ವ ಶೇಖ್ರಪ್ಪ ನಾಗತಿಬಸಾಪುರ ಎಂದು ಕಾಲಂ 9 ರಲ್ಲಿ ನಮೂದು ಇದ್ದು, ಪೋತಿ ಪಟ್ಟ ವಾರಸು ಪ್ರಕಾರ ಹಿಸ್ಸೆ ಬಂದ ಬಗ್ಗೆಡ ಕಾಲಂ 10 ರಲ್ಲಿ ನಮೂದು ಇರುತ್ತದೆ. ಇದರಿಂದ ಇದು ಪಿತಾರ್ಜಿತ ಆಸ್ತಿಯೆಂದು ಕಂಡು ಬರುತ್ತದೆ.

ಅರ್ಜಿದಾರರು ಸಲ್ಲಿಸಿದ ಮರಣ ಪ್ರಮಾಣ ಪತ್ರದ ಪ್ರಕಾರ ಮಣೆಗಾರ ಶೇಖರಪ್ಪ ತಂದೆ ಸಂಗನಬಸಪ್ಪ ಇವರು ದಿ:28–09–2014 ರಂದು ಮರಣ ಹೊಂದಿರುತ್ತಾರೆ. ವಂಶವೃಕ್ಷ ಪ್ರಕಾರ ಮಣೆಗಾರ ಶೇಖರಪ್ಪನಿಗೆ 1.ಮಣೆಗಾರ ಶರಣಮ್ಮ(ಪೋತಿ) ಮತ್ತು 2.ಮಣೆಗಾರ ಗೌರಮ್ಮ ಇವರಿಬ್ಬರು ಪತ್ನಿಯರು.ಮಣೆಗಾರ ಶರಣಮ್ಮ ಇವರಿಗೆ ನಟರಾಜ(ಪೋತಿ–ಅವಿವಾಹಿತ), ಸತ್ಯವತಿ ಮತ್ತು ಶಿವರಂಜನಿ ಇವರು ಮಕ್ಕಳು. ಮಣೆಗಾರ ಗೌರಮ್ಮ ಇವರಿಗೆ ಸಂತಾನ ಇರುವುದಿಲ್ಲ. ಅರ್ಜಿದಾರರು ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಹಾಲಿ ಪಹಣಿಯು ಮಣೆಗಾರ ಶೇಖರಪ್ಪ ತಂದೆ ಸಂಗನಬಸಪ್ಪ ನಾಗತಿಬಸಾಪುರ ಎಂದು ಪಹಣಿಯಲ್ಲಿ ನಮೂದು ಇರುತ್ತದೆ. ಅರ್ಜಿದಾರರ ಪರ ವಕೀಲರು ಸಲ್ಲಿಸಿದ ಲಿಖಿತ ವಾದಪತ್ರದಲ್ಲಿ ಸದರಿ ವಿವಾದಿತ ಜಮೀನು ಅರ್ಜಿದಾರರ ಹಿರಿಯರು ಸಂಪಾದಿಸಿದ ಆಸ್ತಿ ಆಗಿರುತ್ತದೆ. ಈಗ ಅರ್ಜಿದಾರರ ತಂದೆಯ ಹೆಸರಿನಲ್ಲಿ ಖಾತೆಯಿದ್ದು, ಸದರಿಯವರು ದಿ:28–09–2014 ರಂದು ಮರಣ ಹೊಂದಿದ್ದು ಪೋತಿ ವಾರಸಾ ಪ್ರಕಾರ ಖಾತೆ ಬದಲಾವಣೆಗೆ ಜಂಟಿಯಾಗಿ ಕೇಳಿಕೊಂಡಿದ್ದು, ಪೋತಿ ವಾರಸಾ ಪ್ರಕಾರ ಖಾತೆ ಬದಲಾವಣೆಗೆ ಆದೇಶಿಸಬೇಕೆಂದು ಮತ್ತು ಎದರುದಾರರು ಸೃಷ್ಟಿಸಿದ ಕ್ರಯ ಕರಾರು ಪತ್ರದ ಆಧಾರದ ಮೇಲೆ ತಕರಾರು ಸಲ್ಲಿಸಿ ಅರ್ಜಿದಾರರಿಗೆ ತೊಂದರೆ ನೀಡಿ ಆಸ್ತಿ ಕಬಳಿಸುವ ಪ್ರಯತ್ನ ನಡಸಿರುತ್ತಾರೆ. ಅರ್ಜಿದಾರರಾಗಲೀ ಅಥವಾ ಅರ್ಜಿದಾರರ ತಂದೆಯಾಗಲೀ ಯಾರಿಗೂ ಯಾವುದೇ ತರಹದ ದಾಖಲೆಗಳನ್ನು ಬರೆದುಕೊಟ್ಟಿರುವುದಿಲ್ಲ. ಆದ್ದರಿಂದ ಸದರಿ ತಕರಾರು ಕಾನೂನಿನಲ್ಲಿ ಮಾನ್ಯತೆ ಇರುವುದಿಲ್ಲ ಹಾಗೂ ಆ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಅಧಿಕಾರ ಮಾನ್ಯ ನ್ಯಾಯಾಲಯಕ್ಕೆ ಇರುವುದಿಲ್ಲ. ಆದ್ದರಿಂದ ಸದರಿ ತಕರಾರು ತಳ್ಳಿ ಹಾಕಬೇಕೆಂದು ಕೋರಿರುತ್ತಾರೆ. ಸದರಿ ಜಮೀನು ಅರ್ಜಿದಾರರ ತಂದೆ ತನ್ನ ಜೀವಿತ ಕಾಲದಲ್ಲಿ ಕಾನೂನುಬದ್ಧ ಮಾಲೀಕ ಮತ್ತು ಸಾಗುವಳಿದಾರನಿದ್ದು ಅವರ ಮರಣ ನಂತರ ಅರ್ಜಿದಾರರು ಕಾನೂನುಬದ್ಧ ಮಾಲೀಕರು ಮತ್ತು ಸಾಗುವಳಿದಾರರು ಇರುತ್ತಾರೆ. ಎದುರುದಾರರಿಗೆ ಎಂದೂ ಸದರಿ ಜಮೀನಿಗೆ ಸಂಬಂಧಿಸಿದಂತೆ ಹಕ್ಕಾಗಲಿ ಸಾಗುವಳಿಯಾಗಲಿ ಅನುಭೋಗವಾಗಲಿ ಇರುವುದಿಲ್ಲ. ಆಸ್ತಿ ಕಬಳಿಸಲು ಕೆಲವು ದಾಖಲೆಗಳನ್ನು ಸೃಷ್ಟಿಸಿಕೊಂಡು ಪ್ರಯತ್ನ ನಡೆಸಿರುತ್ತಾರೆ. ಎದರುದಾರರು ಸಲ್ಲಿಸಿದ ತಕರಾರನ್ನು ತಳ್ಳಿ

ಹಾಕುತ್ತಾ, ಅರ್ಜಿದಾರರ ಹೆಸರಿಗೆ ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ. ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ತಕರಾರುದಾರರು ಖರೀದಿಸಿದ ಬಗ್ಗೆ ನೀಡಿದ ದಿ:4-12-2006 ರ ಜಮೀನು ಕ್ರಯ ಕರಾರುಪತ್ರವು ನೋಂದಾಯಿತವಾಗಿರುವುದಿಲ್ಲ. ಮಣೆಗಾರ ಶೇಖರಪ್ಪ ತಂದೆ ಸಂಗನಬಸಪ್ಪ ಇವರು ದಿ:28-09-2014 ರಂದು ಮರಣ ಹೊಂದಿದ್ದು, ಖರೀದಿ ದಿನಾಂಕದಿಂದ ಪಟ್ಟಾದಾರರು ಮರಣ ಹೊಂದುವವರೆಗಿನ ಅವದಿಯಲ್ಲಿ ಯಾವುದೇ ಹಕ್ಕು ಬದಲಾವಣೆ ಆಗಿರುವುದಿಲ್ಲ. ತಕರಾರುದಾರರು ತಮ್ಮ ಹಕ್ಕನ್ನು ಸಾಭೀತುಪಡಿಸಿಕೊಳ್ಳುವ ಅವಶ್ಯಕತೆ ಇರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ನಾ.ಕಾ.ಇ/ಪಹಣಿ/ವಿವಾದ/01/2015-16

ದಿನಾಂಕ:06-04-2016

**ಆದೇಶ**

ಪೀಠಿಕೆಯಲ್ಲಿ ವಿವರಿಸಿದ ವಾಸ್ತವಾಂಶ ಮತ್ತು ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129ರ ಪ್ರಕಾರ **M.NO.41/2014-15** ರ ಪ್ರಕರಣದಲ್ಲಿ ಅರ್ಜಿದಾರರ ಅರ್ಜಿಯನ್ನು ಪುರಸ್ಕರಿಸುತ್ತಾ, ಪೋತಿ ವಾರಸ ಪ್ರಕಾರ ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ಸದರಿ ಆದೇಶದಿಂದ ಬಾದೆಯುಂಟಾದಲ್ಲಿ ತಕರಾರುದಾರರು ಸಿವಿಲ್ ನ್ಯಾಯಾಲಯದಲ್ಲಿ ತಮ್ಮ ಹಕ್ಕನ್ನು ಸಾಭೀತುಪಡಿಸಿಕೊಂಡು ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ, ಇಟ್ಟಿಗಿ.
ಇಟ್ಟಿಗಿ.

ಪ್ರತಿಯನ್ನು,
ಅರ್ಜಿದಾರರು ಮತ್ತು ತಕರಾರುದಾರು ಇವರಿಗೆ
ಭೂಮಿ ಕೇಂದ್ರ, ತಾಲೂಕು ಕಾರ್ಯಾಲಯ, ಹೂವಿನಹಡಗಲಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
ಶುದ್ಧಪ್ರತಿ ಕಡತಕ್ಕೆ.